ಇಂದು ದಿನಾಂಕ: 04.07.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು : 1, 2 ಮತ್ತು 7 ಪ್ರತಿವಾದಿ ಪರ ಶ್ರೀ.ಎಸ್.ಎಸ್.ವಕೀಲರಿಂದಃ**

ವಾದ ಪತ್ರದಲ್ಲಿ ಇರುವುದನ್ನು ಯಾರು ಹೇಳಿ ಬರೆಸಿದ್ದಾರೆ ಎಂದು ಗೊತ್ತಿಲ್ಲ. ವಾದ ಪತ್ರದಲ್ಲಿರುವ ಅಂಶಗಳ ಬಗ್ಗೆ ಗೊತ್ತಿದೆಯಾ ಎಂದರೆ ನಾನು ಓದಿಲ್ಲ ಆದ್ದರಿಂದ ಗೊತ್ತಿಲ್ಲ. ಅರ್ಧ ಆಸ್ತಿಗಾಗಿ ಈ ಕೇಸು ಹಾಕಿದ್ದೇನೆ. ದಾವಾ ಆಸ್ತಿಗಳು ಒಟ್ಟು 7½ ಎಕರೆ ಇದೆ ಅದರಲ್ಲಿ ಅರ್ಧ ಭಾಗಕ್ಕೆ ಕೇಸು ಹಾಕಿದ್ದೇನೆ. ದಾವಾ ಆಸ್ತಿಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹೇಳಲು ಗೊತ್ತಿಲ್ಲ. ಮುದ್ದಪ್ಪ ಎಂದರೆ ನನ್ನ ತಂದೆ. ನನ್ನ ತಂದೆಯ ಒಡಹುಟ್ಟಿದವರು ಮೊದಲೇ ತೀರಿಕೊಂಡಿದ್ದಾರೆ ಅವರ ಹೆಸರು ಗೊತ್ತಿಲ್ಲ. ನನ್ನ ದೊಡ್ಡಪ್ಪ ತೀರಿಕೊಂಡಿದ್ದಾರೆ ಅವರಿಗೆ ಹೆಂಡತಿ ಮತ್ತು ಮಕ್ಕಳು ಇರುವುದಿಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪ ನಾನು ಚಿಕ್ಕವಳಿದ್ದಾಗಲೇ ಭಾಗ ಆಗಿದ್ದಾರೆ. ನನ್ನ ತಂದೆ ಮತ್ತು ದೊಡ್ಡಪ್ಪ ಬಾಯಿ ಮಾತಿನಲ್ಲಿ ವಿಭಾಗ ಮಾಡಿಕೊಂಡಿದ್ದಾರೆ. ಆ ರೀತಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ತೋರಿಸಲು ಮ್ಯುಟೇಷನ್ ದಾಖಲೆ ಹಾಜರುಪಡಿಸಿಲ್ಲ. ನನ್ನ ತಂದೆಯ ತಂದೆ ಹೆಸರು ಚನ್ನಬಸಪ್ಪ. ಸದರಿ ಚನ್ನಬಸಪ್ಪನವರಿಗೆ ಹೆಣ್ಣು ಮಕ್ಕಳಿರಲಿಲ್ಲ ಇಬ್ಬರು ಗಂಡು ಮಕ್ಕಳು ಮಾತ್ರ. ಚನ್ನಬಸಪ್ಪ ಯಾವಾಗ ತೀರಿಕೊಂಡಿದ್ದಾರೆ ಎಂದರೆ ಅವರನ್ನು ನಾನು ನೋಡಿಲ್ಲ ಮೊದಲೇ ತೀರಿಕೊಂಡಿದ್ದಾರೆ. ಚನ್ನಬಸಪ್ಪನವರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಎಂದರೆ ಅವರು ಒಬ್ಬರೆ. ಚನ್ನಬಸಪ್ಪನವರ ಹೆಂಡತಿಯ ಹೆಸರು ಮತ್ತು ಅವರು ಯಾವಾಗ ತೀರಿಕೊಂಡರು ಗೊತ್ತಿಲ್ಲ. ದಾವಾ ಆಸ್ತಿಗಳು ಮೂಲತಃ ಯಾರಿಗೆ ಸೇರಿದ್ದು ಎಂದು ಹೇಳಲು ಗೊತ್ತಿಲ್ಲ. ದಾವಾ ಆಸ್ತಿಗಳು ಮೂಲತಃ ನನ್ನ ತಾತನಿಗೆ ಸೇರಿತ್ತು. ನನ್ನ ತಂದೆಯನ್ನು ಮುದ್ದಪ್ಪ ಎಂದು ಮಾತ್ರ ಕರೆಯುತ್ತಿದ್ದರು. ತರಿಕಲ್ಲು ಮುದ್ದಪ್ಪ ಎಂದರೆ ಅಕ್ಕಪಕ್ಕದವರು. ಕುಪ್ಪೆ ಚನ್ನಬಸಪ್ಪ ನನ್ನ ತಾತ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಕುಪ್ಪೆ ಚನ್ನಬಸಪ್ಪನವರಿಗೆ ಇಬ್ಬರು ಮಕ್ಕಳಿದ್ದರು ಎಂದು ತೋರಿಸಲು ದಾಖಲೆ ಕೊಟ್ಟಿಲ್ಲ. ಕುಪ್ಪೆ ಚನ್ನಬಸಪ್ಪನವರಿಗೆ ಇಬ್ಬರು ಮಕ್ಕಳು ಎಂದು ದಾವೆಯಲ್ಲಿ ಬರೆಸಲು ತೊಂದರೆ ಇತ್ತಾ ಎಂದರೆ ಅವರ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಹೇಳುವುದೇನೆಂದರೆ ನನ್ನ ತಂದೆಯ ಅಣ್ಣ ದೊಡ್ಡಯ್ಯ ಎಂತಲೂ ಕರೆಯುತ್ತಿದ್ದರು.

ದೊಡ್ಡಯ್ಯನವರ ಹೆಂಡತಿಯ ಹೆಸರು ಬಸಮ್ಮ. ಮುದ್ದಪ್ಪ ಮತ್ತು ದೊಡ್ಡಯ್ಯ ಚನ್ನಬಸಪ್ಪನವರ ಮಕ್ಕಳು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಕುಪ್ಪೆ ಚನ್ನಬಸಪ್ಪ ನಮ್ಮ ತಾತನಲ್ಲ ಎಂದರೆ ಸುಳ್ಳು. ಕುಪ್ಪೆ ಚನ್ನಬಸಪ್ಪ ಮತ್ತು ಮುದ್ದಪ್ಪ ಮತ್ತು ದೊಡ್ಡಯ್ಯನವರಿಗೆ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಬೇಲೂರು ಗ್ರಾಮದಲ್ಲಿ ವಾಸವಿಲ್ಲ. ಅದರ ಪಕ್ಕದಲ್ಲಿರುವ ಕೆಳಗನಹಳ್ಳಿಯಲ್ಲಿ 30 ವರ್ಷಗಳಿಂದ ವಾಸವಿದ್ದೇನೆ. 1 ನೇ ಪ್ರತಿವಾದಿಯ ಹೆಸರು ಮಹದೇವನಲ್ಲ ಮಹದೇವಪ್ಪ ಎಂದರೆ ಸುಳ್ಳು. ನನಗೂ 1 ನೇ ಪ್ರತಿವಾದಿಗೂ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವ್ಯವಸಾಯಗಾರರು ಮತ್ತು ಬೇಲೂರಿನಲ್ಲಿ ವಾಸ ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ಬೇರೆ ಬೇರೆ ಊರಿನಲ್ಲಿ ವಾಸವಿರುವುದರಿಂದ ನಾವು ಒಟ್ಟು ಕುಟುಂಬದಲ್ಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ವ್ಯವಸಾಯ ಮಾಡಲು 1 ನೇ ಪ್ರತಿವಾದಿ ಬ್ಯಾಂಕ್ ನಿಂದ ಸಾಲ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುದ್ದಪ್ಪನವರಿಗೆ ಆರೋಗ್ಯ ಸರಿಯಿಲ್ಲದ ಕಾರಣ 1 ನೇ ಪ್ರತಿವಾದಿ ಹಣ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ವ್ಯವಸಾಯದ ಖರ್ಚು ಮತ್ತು ಭೂಮಿಯ ಅಭಿವೃದ್ಧಿಗಾಗಿ 1 ನೇ ಪ್ರತಿವಾದಿ ಸಾಲ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ತಂದೆಯ ಆಸ್ತಿಗಳಲ್ಲ ಎಂದರೆ ಸುಳ್ಳು. ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ತಂದೆಯ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಚನ್ನಬಸಪ್ಪನವರಿಗೆ ಮಕ್ಕಳಿಲ್ಲದಿದ್ದ ಕಾರಣ 1 ನೇ ಪ್ರತಿವಾದಿಗೆ ಖಾತೆ ಮಾಡಿಸಿಕೊಟ್ಟಿದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಗಳು ಮುದ್ದಪ್ಪನಿಗೆ ಸೇರಿಲ್ಲದ ಕಾರಣ ಅವುಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**